**ಪತ್ರಿಕಾ ಪ್ರಕಟಣೆ**

**ವಿಜಯಪುರ**
**ದಿನಾಂಕ: 03.06.2021.**

**1] ಗಾಂಧಿಚೌಕ ಪೊಲೀಸ ಠಾಣೆ ಗುನ್ನಾ ನಂ: 121/2021 ಕಲಂ: 188, 269 ಐಪಿಸಿ,**

ದಿನಾಂಕ: 02/06/2021 ರಂದು 17.00 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತರಾದ ಶ್ರೀನಾಥ ತಂದೆ ಯಮುನಪ್ಪ ಕೌಲಗಿ, ವಯಾ: 45 ವರ್ಷ, ಸಾ॥ ದರಬಾರ ಸ್ಕೂಲ್ ಹಿಂದೆ, ಆಸಾರ ಗಲ್ಲಿ ವಿಜಯಪುರ. ಇದರಲ್ಲಿ ನಮೂದಿಸಿದ ಆರೋಪಿತರು ಸದರಿ ಆರೋಪಿತ ಶ್ರೀನಾಥ ತಂದೆ ಯಮುನಪ್ಪ ಕೌಲಗಿ, ಈತನು ಈಗ ಕೊರೊನಾ ವೈರಸ್ / ಕೋವಿಡ್-19 ಸಾಂಕ್ರಾಮಿಕವಾಗಿ ಹರಡದಂತೆ ತಡೆಗಟ್ಟುವ ಮತ್ತು ಅಪಾಯಕಾರಿ ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವ ನಿಟ್ಟಿನಲ್ಲಿ ಮತ್ತು ಸಾರ್ವಜನಿಕರ ಹಿತದೃಷ್ಟಿಯನ್ನು ಕಾಯ್ದುಕೊಳ್ಳಲು ಮುಂಜಾಗ್ರತ ಕ್ರಮವಾಗಿ ಕರ್ನಾಟಕ ಸರ್ಕಾರ ಅಗತ್ಯ ವಸ್ತುಗಳ ಸಾಗಾಣಿಕೆ ವಾಹನಗಳನ್ನು ಹೊರತುಪಡಿಸಿ ಅನಗತ್ಯವಾಗಿ ವಾಹನ ಸಂಚಾರವನ್ನು ನಿಷೇಧದ ಆದೇಶ ಹೊರಡಿಸಿದ್ದರೂ ಸಹ ತಿಳಿದೂ ತಿಳಿದೂ **ಕೆಎ-28 ಸಿ-0887** ನೇ ನಂಬರಿನ ಆಟೋವನ್ನು ತೆಗೆದು ಕೊಂಡು ಬಂದು ಅಪಾಯಕಾರಿ ಸಾಂಕ್ರಾಮಿಕ ರೋಗ ಹರಡುವಿಕೆಯ ಬಗ್ಗೆ ನಿರ್ಲಕ್ಷ್ಯವಹಿಸಿ ಕರ್ನಾಟಕ ಸರ್ಕಾರದ ಆದೇಶ ಉಲ್ಲಂಘನೆ ಮಾಡಿದ ಅಪರಾಧ. ಈ ಬಗ್ಗೆ ಸ:ತ ಶ್ರೀಮತಿ.ಪಿ.ಎಮ್ ಚೌರ [ಹೆಚ್ಚುವರಿ] ಗಾಂಧಿಚೌಕ ಪೊಲೀಸ್ ಠಾಣೆ ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 02.06.2021 ರಂದು ಗಾಂಧಿಚೌಕ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ತಿಕೋಟಾ ಪೊಲಿಸ್ ಠಾಣೆ ಗುನ್ನಾ. ನಂ: 81/2021 ಕಲಂ: 188, 269 ಐಪಿಸಿ**

**ದಿನಾಂಕ: 02.06.2021 ರಂದು 19:00 ಗಂಟೆಯ ಸುಮಾರಿಗೆ** ಇದರಲ್ಲಿಯ ಆರೋಪಿತನಾದ ಗೌಸ ತಂದೆ ಉಸ್ಮಾನಸಾಬ ಸುನ್ನೇವಾಲೆ ವಯಾ-30 ವರ್ಷ ಜಾತಿ-ಮುಸ್ಲಿಂ ಉದ್ಯೋಗ-ವ್ಯಾಪಾರ ಸಾ-ತಿಕೋಟಾ ಸದರಿ ಗೌಸ ತಂದೆ ಉಸ್ಮಾನಸಾಬ ಸುನ್ನೇವಾಲೆ ವಯಾ-30 ವರ್ಷ ಉದ್ಯೋಗ-ವ್ಯಾಪಾರ ಸಾ-ತಿಕೋಟಾ ಈತನು ಈಗ ಕರೋನಾ ವೈರಸ್/ಕೋವಿಡ್-19 ಸಾಂಕ್ರಾಮೀಕ ರೋಗ ಹರಡದಂತೆ ತಡೆಗಟ್ಟುವ ಮತ್ತು ಅಪಾಯಕಾರಿ ಸಾಂಕ್ರಾಮೀಕ ರೋಗವನ್ನು ತಡೆಗಟ್ಟುವ ನಿಟ್ಟಿನಲ್ಲಿ ಮತ್ತು ಸಾರ್ವಜನೀಕರ ಹಿತದೃಟ್ಟಿಯನ್ನು ಕಾಯ್ದುಕೊಳ್ಳಲು ಮುಂಜಾಗೃತಾ ಕ್ರಮವಾಗಿ ಕರ್ನಾಟಕ ಸರಕಾರದ ನಿರ್ದೇಶನದ ಆದೇಶದಂತೆ ತನ್ನ ಚಿಕನ್(ಮಾಂಸದ) ಅಂಗಡಿಯನ್ನು ತೆರೆಯಬಾರದು ಅಂತಾ ಕರ್ನಾಟಕ ಸರಕಾರದ ಆದೇಶವಿದ್ದರೂ ಸಹ ತನ್ನ ಚಿಕನ್(ಮಾಂಸದ) ಅಂಗಡಿಯನ್ನು ತೆರೆದು ಸಾರ್ವಜನೀಕರಿಗೆ ಸೇರಿಸಿ ವ್ಯಾಪಾರ ವಹಿವಾಟು ಮಾಡಲು ಅವಕಾಶ ಮಾಡಿಕೊಟ್ಟು ಅಪಾಯಕಾರಿ ಸಾಂಕ್ರಾಮೀಕ ರೋಗ ಹರಡುವಿಕೆ ಬಗ್ಗೆ ನಿರ್ಲಕ್ಷ ವಹಿಸಿ ಮಾನ್ಯ ಕರ್ನಾಟಕ ಸರಕಾರದ ಆದೇಶವನ್ನು ಪಾಲನೇ ಮಾಡದೇ ಆದೇಶ ಉಲ್ಲಂಘನೆ ಮಾಡಿದ್ದು ಇರುತ್ತದೆ. ಈ ಬಗ್ಗೆ ಶ್ರೀ ಎಸ್ ಕೆ ಲಂಗೋಟಿ ಮಪಿಎಸ್ ಐ ತಿಕೋಟಾ ಪಿಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 02.06.2021 ರಂದು ತಿಕೋಟಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಆಲಮೇಲ ಪೊಲಿಸ್ ಠಾಣೆ ಗುನ್ನಾ. ನಂ: 61/2021 ಕಲಂ: 188, 269, ಐಪಿಸಿ, ಹಾಗೂ 15 (A), 32 (3) ಕೆ.ಇ ಆ್ಯಕ್ಟ್**

ದಿನಾಂಕ: 02.06.2021 ರಂದು 17.00 ಗಂಟೆಯ ಸುಮಾರಿಗೆ ಇದರಲ್ಲಿಯ ಆರೋಪಿತನಾದ 1] ಭೋಗೇಶ ತಂದೆ ಮೋಹನ ತಳವಾರ ವಯಾ: 32 ವರ್ಷ, ಸಾ: ಕೋರಳ್ಳಿ ತಾ: ಸಿಂದಗಿ ಜಿ: ವಿಜಯಪುರ. ಈತನು ತನಗೆ ಸರಕಾರದಿಂದ ಯಾವುದೇ ಪರವಾನಿಗೆ ಇಲ್ಲದೆ ಅನಧಿಕೃತವಾಗಿ ಕೋರಳ್ಳಿ ಗ್ರಾಮದಲ್ಲಿ ಬಳಗಾನೂರ ರೋಡಿಗೆ ಇರುವ ತನ್ನ ಪಾನ್ ಶಾಪ್ ಅಂಗಡಿಯ ಮುಂದೆ ಆರೋಪಿತನು ಕೋರೋನಾ ಸಾಂಕ್ರಾಮಿಕ ರೋಗವು (ಕೋವಿಡ್-19) ವ್ಯಾಪಕವಾಗಿ ಹರಡುತ್ತಿದ್ದರಿಂದ ಮಾನ್ಯ ಜಿಲ್ಲಾ ದಂಢಾಧಿಕಾರಿಗಳು ಸಾರ್ವಜನಿಕರಿಗೆ ಗುಂಪಾಗಿ ಕೂಡುವುದು ಸೇರುವುದು ಮತ್ತು ಸಾಮಾಜೀಕ ಅಂತರ ಕಾಯ್ದುಕೊಳ್ಳವುದು ಗುಂಪಾಗಿ ಜನ ಸೇರದಂತೆ ಮುನ್ನೆಚರಿಕೆ ಕ್ರಮವಾಗಿ ನಿಷೇದಾಜ್ಞೆ ಮಾಡಿದ್ದು, ಸದರ ಆಜ್ಞೆಯನ್ನು ಧಿಕ್ಕರಿಸಿ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳದೆ ಜನರನ್ನು ಗುಂಪಾಗಿ ಸೇರಿಸಿಕೊಂಡು ಸರಕಾರ ವಿಧಿಸಿರುವ ನಿಯಮಾವಳಿಗಳನ್ನು ಉಲ್ಲಂಘಿಸಿ ಸಾಂಕ್ರಾಮಿಕ ರೋಗವು ಹರಡದಂತೆ ಕೈಕೊಂಡ ಕ್ರಮಗಳ ವಿರುದ್ದವಾಗಿ ಸಾರ್ವಜನಿಕರಿಗೆ ಸೊಂಕು ಹರಡುವ ಸಂಭವ ಇದೆ ಅಂತಾ ಗೊತ್ತಿದ್ದರು ಕೂಡಾ ಉದ್ದೇಶ ಪೂರ್ವಕವಾಗಿ ಸದರಿ ಸ್ಥಳದಲ್ಲಿ ಸರಕಾರದಿಂದಾಗಲಿ, ಅಥವಾ ಸಂಬಂಧಪಟ್ಟ ಇಲಾಖೆಯಿಂದಾಗಲಿ ಪರವಾನಿಗೆ ಪಡಯದೇ ಅನಧಿಕೃತವಾಗಿ ಸಾರ್ವಜನಿಕರಿಗೆ ಮದ್ಯ ಕುಡಿಯಲು ಸ್ಥಳಾವಕಾಶ ಮಾಡಿಕೊಟ್ಟಾಗ ನಮ್ಮ ತಾಬಾಕ್ಕೆ ಸಿಕ್ಕಿದ್ದು, ಈ ಬಗ್ಗೆ ಶ್ರೀ ಸುರೇಶ ಆರ್ ಗಡ್ಡಿ ಪಿಎಸ್ಐ ಆಲಮೇಲ ಪೊಲೀಸ್ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ, ದಿನಾಂಕ: 02.06.2021 ರಂದು ಆಲಮೇಲ ಪೊಲೀಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ದೇವರಹಿಪ್ಪರಗಿ ಪೊಲೀಸ್ ಠಾಣೆ ಗುನ್ನಾ. ನಂ: 89/2021 ಕಲಂ: 188,269 ಐಪಿಸಿ, & 15 (A) 32(3) K.E.ACT**

ದಿನಾಂಕ: 02.06.2021 ರಂದು 16:45 ಗಂಟೆಗೆ ಇದರಲ್ಲಿ ಆರೋಪಿತನಾದ **ಮಡಿವಾಳಪ್ಪ ತಂದೆ ಯಮನಪ್ಪ ಬೆಣ್ಣೂರ ವಯಾ-48 ವರ್ಷ, ಜಾತಿ-ಹಿಂದು ಹರಿಜನ, ಉದ್ಯೋಗ: ವ್ಯಾಪಾರ, ಸಾ॥ ದೇವರಹಿಪ್ಪರಗಿ,** ಆರೋಪಿತನು ಪ್ರಸ್ತುತ ಕೋರೊನಾ ಸಾಂಕ್ರಾಮಿಕ ರೋಗವು (ಕೋವಿಡ್-19) ವ್ಯಾಪಕವಾಗಿ ಹರಡುತಿದ್ದರಿಂದ ಸರ್ಕಾರದ ಆದೇಶದನ್ವಯ ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪುರ ರವರು ಸಾರ್ವಜನಿಕರಿಗೆ ಗುಂಪಾಗಿ ಕೂಡುವುದು ಸೇರುವುದು ಮತ್ತು ಸಾಮಾಜೀಕ ಅಂತರ ಕಾಯ್ದುಕೊಳ್ಳವ್ಯದು, ಗುಂಪಾಗಿ ಜನ ಸೇರದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಜಿಲ್ಲಾದ್ಯಾಂತ ಸಾರ್ವಜನಿಕರು ಅನಾವಶ್ಯಕವಾಗಿ ಹೊರಗಡೆ ಬರದಂತೆ ನಿಷೇದಾಜ್ಞೆ ಜಾರಿ ಮಾಡಿದ್ದು, ಅದನ್ನು ಉಲ್ಲಂಘಿಸಿ ಸಾಮಾಜೀಕ ಅಂತರವನ್ನು ಕಾಯ್ದುಕೊಳ್ಳದೆ ಜನರನ್ನು ಗುಂಪಾಗಿ ಸೇರಿಸಿಕೊಂಡು ಸರಕಾರ ವಿಧಿಸಿರುವ ನಿಯಮಾವಳಿಗಳನ್ನು ಉಲ್ಲಂಘಿಸಿ ಸಾಂಕ್ರಾಮಿಕ ರೋಗವು ಹರಡದಂತೆ ಕೈಕೊಂಡ ಕ್ರಮಗಳ ವಿರುದ್ದವಾಗಿ ಸಾರ್ವಜನಿಕರಿಗೆ ಸೊಂಕು ಹರಡುವ ಸಂಭವ ಇದೆ ಅಂತ ಗೊತ್ತಿದ್ದರು ಕೂಡಾ ಉದ್ದೇಶ ಪೂರ್ವಕವಾಗಿ ದೇವರಹಿಪ್ಪರಗಿ-ಸಿಂದಗಿ ಎನ್.ಎಚ್-50 ಸಾರ್ವಜನಿಕ ರಸ್ತೆ ಬಾಜು, ದೇವರಹಿಪ್ಪರಗಿಯ ಶ್ರೀ ಮಲ್ಲಯ್ಯನ ಗುಡಿ ಸಮೀಪ ಇರುವ ಸಾಗರ ದಾಬಾದ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನರಿಗೆ ಸರಾಯಿ ಕುಡಿಯಲು ಅವಕಾಶ ಮಾಡಿಕೊಟ್ಟಾಗ ನಮ್ಮ ತಾಬಾಕ್ಕೆ ಸಿಕ್ಕಿದ್ದು ಇರುತ್ತದೆ. ಈ ಬಗ್ಗೆ ಸ॥ ತ॥ ಪಿ॥ ರವಿ. ಯಡವನ್ನವರಪಿ.ಎಸ್.ಐ ದೇವರ ಹಿಪ್ಪರಗಿ ಪೊಲೀಸ್ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ, ದಿನಾಂಕ: 02.06.2021 ರಂದು ದೇವರಹಿಪ್ಪರಗಿ ಪೊಲೀಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**5] ಮುದ್ದೇಬಿಹಾಳ ಪೊಲೀಸ್ ಠಾಣೆ ಗುನ್ನಾ. ನಂ: 99/2021 ಕಲಂ: 188,269,271 ಐಪಿಸಿ, ಮತ್ತು 78(3) ಕೆ.ಪಿ. ಆ್ಯಕ್ಟ್**

ದಿನಾಂಕ: 02.06.2021 ರಂದು 15:45 ಘಂಟೆಗೆ ಇದರಲ್ಲಿ ಆರೋಪಿತನಾದ 1] ಮಹಾದೇವಪ್ಪ ತಂದೆ. ಶಿವಪ್ಪ ನಿಡಗುಂದಿ ವಯಾ:42 ವರ್ಷ, ಜಾತಿ-ಹಿಂದು ಲಿಂಗಾಯತ, ಉದ್ಯೋಗ-ಒಕ್ಕಲುತನ ಸಾ: ಆಲಕೊಪ್ಪರ ತಾ: ಮುದ್ದೇಬಿಹಾಳ ಸಾಂಕ್ರಾಮಿಕ ರೋಗ ಒಬ್ಬರಿಂದ ಒಬ್ಬರಿಗೆ ಸಾರ್ವಜನಿಕರಿಗೆ ಹರಡದಂತೆ ತಡೆಯುವ ಉದ್ದೇಶದಿಂದಾ ಲಾಕ್-ಡೌನ್ ಜಾರಿ ಮಾಡಿದ್ದು ಮತ್ತು ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪೂರ ರವರು ಕೂಡಾ ಕೋರೋನಾ ವೈರಸ್/ಕೊವಿಡ್-19 ಸಾಂಕ್ರಾಮಿಕ ರೋಗ ಒಬ್ಬರಿಂದ ಒಬ್ಬರಿಗೆ ಸಾರ್ವಜನಿಕರಿಗೆ ಹರಡದಂತೆ ತಡೆಯುವ ಉದ್ದೇಶದಿಂದಾ ಮುಂಜಾಗೃತಾ ಕ್ರಮವಾಗಿ ಹೊರಡಿಸಿದ ಆದೇಶವನ್ನು ಉಲ್ಲಂಘನೆ ಮಾಡಿ, ಕೋರೋನಾ ಸಾಂಕ್ರಾಮಿಕ ರೋಗ ಒಬ್ಬರಿಂದಾ ಒಬ್ಬರಿಗೆ ಹರಡುತ್ತದೆ ಅಂತಾ ಗೊತ್ತಿದ್ದರೂ ಕೂಡಾ ಉಲ್ಲಂಘನೆ ಮಾಡಿದ್ದಲ್ಲದೇ, ತಮ್ಮ-ತಮ್ಮ ಪಾಯದೇಗೋಸ್ಕರ ಒಂದು ರೂಪಾಯಿಗೆ 80 ರೂಪಾಯಿ ಕೊಡುವ ಕರಾರಿನ ಮೇಲೆ ಅಂಕಿ ಸಂಖ್ಯೆಗಳ ಆಧಾರದ ಮೇಲೆ ಸಾರ್ವಜನಿಕರಿಂದ ಹಣ ಪಡೆದುಕೊಂಡು ಓಸಿ ನಂಬರ ಬರೆದುಕೊಟ್ಟು ಕಲ್ಯಾಣ ಮಟಕಾ ಅಂಬುವ ಓ.ಸಿ ಜೂಜಾಟವನ್ನು ನಡೆಸುತ್ತಿದ್ದಾಗ ಸಿಕ್ಕಿದ್ದು ಇರುತ್ತದೆ. ಈ ಬಗ್ಗೆ ಸೋಮನಗೌಡ ಬಿ.ಗೌಡರ ಪಿ.ಎಸ್.ಐ (ಕಾ.ಸು) ಬಬಲೇಶ್ವರ ಪಿ.ಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ, ದಿನಾಂಕ: 01.06.2021 ರಂದು ಮುದ್ದೇಬಿಹಾಳ ಪೊಲೀಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.